ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳು ಹಾಗೆ ಒಪ್ಪಿಕೊಂಡ ಮೇಲೆ ನನ್ನ ಅಭ್ಯಂತರ ಏನೂ ಇಲ್ಲ. ಮುಂದೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತಲ್ಲ.

ಶ್ರೀ ಎನ್. ಜಿ. ನಾಯಕ್.—ಅಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಕಳೆದ ೩ ದಿವಸದಿಂದಲೂ ಕೇಳದೆ ಲ್ಯಾಪ್ಸ್ ಆಗುತ್ತಾ ಇದೆ.

ಅಧ್ಯಕ್ಷರು.—ನೀವು ಸೀಟಿನಲ್ಲಿ ಇರಲಿಲ್ಲ, ಆದರಿಂದ ನೀವು ಕೇಳಲಿಲ್ಲಾ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಲೋಕೋಪಯೋಗಿ ಇಲಾಖೆಯ ೩೬ ನಾಮಿರ ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇದರ ಬಗ್ಗೆ ರೂಲ್ ೬೮ರ ಪ್ರಕಾರ ನಾನು ಒಂದು ನೋಟೀಸ್ ಅನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ವಿ. ಎಸ್. ಆಚಾರ.—ಸ್ವಾಮಿ, ಈ ಪ್ರಶ್ನೆ ಪಟ್ಟಿಯಲ್ಲಿರತಕ್ಕಂಥಾ ಸೀರಿಯಲ್ ನಂಬರ್‌ಗಳನ್ನು ನೋಡಿದರೆ ತಾವು ಯಾವ ಆಲ್‌ಫಬೆಟಿಕಲ್ ಪ್ರಕಾರ ಕಳಂಹಿಸುತ್ತೀರಿ ಅನ್ನುವುದು ಗೊತ್ತಾಗುವುದಿಲ್ಲ. ಏತಕ್ಕೆಂದರೆ ಪ್ರತಿದಿವಸ ಶ್ರೀ ಗಂಗಣ್ಣ ಅವರ ಪ್ರಶ್ನೆ ಮೇಲೆ ಬರುತ್ತದೆ, ಕೊನೆಯಲ್ಲಿ ನನ್ನದು, ಶ್ರೀ ಪಂಪಾತಿಯವರದ್ದು, ಶ್ರೀ ಎಂ.ಎಸ್. ಕೃಷ್ಣನ್ ಅವರದ್ದು ಬರುತ್ತದೆ. ನಮ್ಮದೆಲ್ಲಾ ಕೊನೆಗೆ ಬರುತ್ತದೆ. ಯಾವ ಆಲ್‌ಫಬೆಟಿಕಲ್ ಪ್ರಕಾರ ಈ ರೀತಿ ಬರುತ್ತಾ ಇದೆ ಅನ್ನುವುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ನಾವು ನಿಯಮವನ್ನು ಬಿಟ್ಟು ಹೋಗುವುದಿಲ್ಲ. ಯಾವಾಗಲೂ ತಾವು ಎಲ್ಲಾ ಪ್ರಶ್ನೆಗಳಿಗೂ ಉಪಪ್ರಶ್ನೆಗಳನ್ನು ಕೇಳುತ್ತಿದ್ದೀರಲ್ಲಾ, ಅದು ಸರಿಯೇ ಅನ್ನುವುದನ್ನು ನಿಮ್ಮನ್ನು ನೀವೇ ಪ್ರಶ್ನೆ ಮಾಡಿಕೊಳ್ಳಿ, ಆಗ ಗೊತ್ತಾಗುತ್ತದೆ.

ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು

ವಿಷಯ : ರಾಜಾಜಿನಗರದಲ್ಲಿ ಒಂದು ಪಶುವೈದ್ಯ ಶಾಲೆ ಕಟ್ಟಡವನ್ನು ಕಟ್ಟುವ ಬಗ್ಗೆ.

ಪ್ರ. ೬೭ (೯೯) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಪಶುಸಂಗೋಪನ ಪಶು ವೈದ್ಯ ಸೇವೆ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜಾಜಿನಗರದ ನಿವಾಸಿಗಳಿಂದ ಮತ್ತು ತಾಸಕರಿಂದ ಅಲ್ಲಿ ಒಂದು ಪಶುವೈದ್ಯ ಶಾಲೆಯ ಕಟ್ಟಡವನ್ನು ಕಟ್ಟುವ ವಿಷಯವಾಗಿ ಅರ್ಜಿಗಳು ಬಂದಿವೆಯು :

(ಆ) ನಿವೇಶನ ತಪಾವಣೆಯನ್ನು ನಗರ ಕಾರ್ಪೊರೇಷನ್ ಕಮಿಷನರ್‌ರವರು ಮಾಡಿದ್ದಾರೆಯು :

(ಇ) ಪಶುವೈದ್ಯ ಶಾಲೆಯ ಕಟ್ಟಡವನ್ನು ಕಟ್ಟಲು ಕಾರ್ಪೊರೇಷನ್ ರವರು ಮಂಜೂರಾತಿ ಯನ್ನು ನೀಡಿದ್ದಾರೆಯೇ :

(ಈ) ಕಾಮಗಾರಿ ಕೆಲಸವನ್ನು ತಕ್ಷಣ ತೆಗೆದುಕೊಳ್ಳುವರೆ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಳ್ (ಪಶುಸಂಗೋಪನಾ ಪಶುವೈದ್ಯ ಸೇವೆ ಮತ್ತು ತೋಟಗಾರಿಕೆ ಮಂತ್ರಿಗಳು).—

(ಅ) ಹೌದು

(ಆ) ಇಲ್ಲ

(ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.